# ಹೊಳೆನರಸೀಪುರದ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

## ಸಿ.ಸಿ .ನಂ. 238/18

ಸಾಕ್ಷಿಯ ಹೆಸರು : ರಂಗಸ್ವಾಮಿ ಡಿ.ಡಬ್ಲ್ಯೂ- 1
ತಂದೆ ಹೆಸರು : ನಂಜೇಗೌಡ
ವಯಸ್ಸು : 39 ವರ್ಷ ಪ್ರಮಾಣೀಕರಿಸಿದ ದಿಃ 12-11-2019
ವೃತ್ತಿ : ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರ
ವಾಸ : ಹೊಳೆನರಸೀಪುರ

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಬಿ.ಆರ್.ಪಿ ವಕೀಲರಿಂದ**

ದಿಃ 20.06.2014 ರ ದೃಢೀಕರಣ ಪತ್ರದ ದೃಢೀಕೃತ ನಕಲನ್ನು ನಿಡಿ 1 ಎಂದು ಗುರುತಿಸಲಾಯಿತು. ನಾನು ತೋಟಗಾರಿಕೆ ಇಲಾಖೆಯಲ್ಲಿ ಲ್ಯಾಬ್ ಅಸಿಸ್ಟಂಟ್ ಆಗಿ ಕೆಲಸ ಮಾಡಿದ್ದೇನು. ನಾನು ಸದರಿ ಇಲಾಖೆಯಲ್ಲಿ ವಾಹನ ಚಾಲಕನಾಗಿ ಕೆಲಸ ಮಾಡಿಲ್ಲ. ನನಗೆ ಫಿರ್ಯಾದುದಾರರ ಪರಿಚಯ ಇಲ್ಲ. ಈ ಪ್ರಕರಣ ದಾಖಲಾದ ನಂತರ ಫಿರ್ಯಾದುದಾರ ನಮ್ಮ ಕಚೇರಿಯಲ್ಲಿ ಕೆಲಸಗಾರರಾಗಿದ್ದ ತಾರಾನಾಥರವರ ಹೆಂಡತಿಯ ತಮ್ಮ ಎಂಬುದು ನನಗೆ ಗೊತ್ತಾಗಿದೆ. ನಾನು ಫಿರ್ಯಾದುದಾರರಿಂದ ಯಾವುದೆ ಸಾಲ ಪಡೆದಿಲ್ಲ ಮತ್ತು ಅವರಿಗೆ ನಿ.ಪಿ 1 ರ ಚೆಕ್ಕನ್ನು ಕೊಟ್ಟಿಲ್ಲ. ತಾರಾನಾಥರವರು ಚೀಟಿ ವ್ಯವಹಾರ ಮಾಡುತ್ತಿದ್ದರು. ಈಗ 5 ವರ್ಷಗಳ ಹಿಂದೆ ಸದರಿ ಚೀಟಿ ವ್ಯವಹಾರಕ್ಕೆ ಸಬಂದಿಸಿದಂತೆನಾನು ನನ್ನ ಖಾತೆಯ 2 ಸಹಿ ಮಾಡಿದ ಚೆಕ್ಕುಗಳನ್ನು ತಾರಾನಾಥರವರಿಗೆ ನೀಡಿದ್ದೇನು. ನಾನು ಸದರಿ ಚೆಕ್ಕಿನಲ್ಲಿ ಯಾವುದೆ ಹೆಸರು, ದಿನಾಂಕ ಮತ್ತು ಮೊತ್ತ ನಮೂದು ಮಾಡಿರಲಿಲ್ಲ. ಚೀಟಿ ವ್ಯವಹಾರ ಮುಗಿದ ನಂತರ ನನ್ನ ಚೆಕ್ಕನ್ನು ವಾಪಸ್ಸು ಕೇಳಿದಾಗ ತಾರಾನಾಥರವರು ಹುಡುಕಿ ಕೊಡುವುದಾಗಿ ತಿಳಿಸಿದ್ದರು. ತಾರಾನಾಥರವರು ಈಗ ಅರಕಲಗೂಡು ತಾಲ್ಲೂಕಿನ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ನಾನು ಕಾರು ಖರೀದಿ ಮಾಡಿಲ್ಲ ಮತ್ತು ಮನೆ ಕಟ್ಟಿಲ್ಲ. ನಾನು ಯಾರಿಂದ ಕೈಸಾಲವನ್ನು ಸಹ ಪಡೆದುಕೊಂಡಿಲ್ಲ. ದೂರು ಮತ್ತು ಫಿರ್ಯಾದುದಾರರ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಸಿದ್ದಾರೆ. ಆದ್ದರಿಂದ ದೂರನ್ನು ವಜಾ ಮಾಡುವಂತೆ ಕೋರಿಕೊಳ್ಳುತ್ತೇನೆ.

ಫಿರ್ಯಾದುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲದ ಕಾರಣ ಪಾಟೀಸವಾಲಿಗೆ ಮುಂದುಡಲಾಯಿತು.

**(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಒ.**

ಸಿವಿಲ್ ಜಡ್ಜ್, ಹೊಳೆನರಸೀಪುರ